ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

**:ಚೆಕ್‌ಲಿಸ್ಟ್:**

ಫೆಬ್ರವರಿ-2023 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ತಾತ್ಕಾಲಿಕ ವೇಳಾಪಟ್ಟಿಯನ್ನು www.dtek.karnataka.gov.in ನಲ್ಲಿ ಪ್ರಕಟಿಸಲಾಗಿದೆ. ಥಿಯರಿ ಪರೀಕ್ಷೆಗಳು ದಿನಾಂಕ:**03/02/2023** ರಿಂದ **23/02/2023** ರವರೆಗೆ ನಡೆಯಲಿವೆ.

**ಕೋವಿಡ್-19 ಸಾಂಕ್ರಾಮಿಕ ರೋಗ ನಿಯಂತ್ರಣ ಹಾಗೂ ಪ್ರಸರಣ ತಡೆಗಟ್ಟುವ ಹಿನ್ನೆಲೆಯಲ್ಲಿ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಚೆಕ್‌ಲಿಸ್ಟ್ ಅನ್ನು ಈ ಕೆಳಕಂಡಂತೆ** ನೀಡಲಾಗಿದೆ.

1. ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ, ಸಂಸ್ಥೆಯ ವಿದ್ಯಾರ್ಥಿಗಳು, ಸಿಬ್ಬಂದಿವರ್ಗ, ಉಪನ್ಯಾಸಕರು, ಪ್ರಾಂಶುಪಾಲರು ಸಂಸ್ಥೆಗೆ ಹಾಜರಾಗುವ ಸಾರ್ವಜನಿಕರು ಮತ್ತು ಪೋಷಕರು ಕರೋನಾ ಸಾಂಕ್ರಾಮಿಕ ರೋಗವನ್ನು ತಡೆಯುವ ನಿಟ್ಟಿನಲ್ಲಿ, ಈಗಾಗಲೇ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ಜಿಲ್ಲಾಡಳಿತ, ಜಿಲ್ಲಾ ವೈದ್ಯಾಧಿಕಾರಿಗಳು ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ವಿದ್ಯಾರ್ಥಿಗಳು / ಸಿಬ್ಬಂದಿಗಳು / ಉಪನ್ಯಾಸಕರು/ ಪ್ರಾಂಶುಪಾಲರು ತಮ್ಮ ತಮ್ಮ ಮೊಬೈಲ್‌ಗಳಲ್ಲಿ "ಆರೋಗ್ಯ ಸೇತು" ಆ್ಯಪ್ ಅನ್ನು ಅಳವಡಿಸಿಕೊಳ್ಳಲು ತಿಳಿಸಲಾಗಿದೆ.
3. ಪರೀಕ್ಷಾ ಕೇಂದ್ರದಲ್ಲಿ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಪ್ರತಿಯೊಬ್ಬ ಸಿಬ್ಬಂದಿಯವರು ತಮ್ಮಿಂದ ಸಾಧ್ಯವಾಗಬಹುದಾದ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಂತ ಪ್ರಮುಖವಾಗಿರುತ್ತದೆ.
4. ಸಂಸ್ಥೆಯ ಆವರಣ, ಕೊಠಡಿಗಳು, ಪರೀಕ್ಷಾ ಕೊಠಡಿಗಳು, ಶೌಚಾಲಯಗಳು, ನೀರು ಸಂಗ್ರಹಣ ಟ್ಯಾಂಕ್‌ಗಳು ಹಾಗು ಸುತ್ತಮುತ್ತಲಿನ ಪರಿಸರದ ಸ್ವಚ್ಛತೆಯ ಬಗ್ಗೆ ಕಾಳಜಿವಹಿಸುವುದು.
5. ಸಂಸ್ಥೆಯಲ್ಲಿ ಪರಿಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸುವುದು.
6. ವಿದ್ಯಾರ್ಥಿಗಳು/ಸಿಬ್ಬಂದಿ ವರ್ಗದವರು ಬಿಸಿ ನೀರನ್ನು ಕುಡಿಯುವುದು.

7. ಪರೀಕ್ಷಾ ಕೇಂದ್ರಕ್ಕೆ ಬರುವಾಗ ಕಡ್ಡಾಯವಾಗಿ ಮಾಸ್ಕ್ ಧರಿಸುವುದು.

8. ಪರೀಕ್ಷಾ ಕೊಠಡಿಯನ್ನು ಪ್ರವೇಶಿಸುವ ಮುನ್ನ ಹಾಗು ಪರೀಕ್ಷಾ ಅವಧಿ ನಂತರ ಪರೀಕ್ಷಾ ಕೊಠಡಿಯಿಂದ ನಿರ್ಗಮಿಸುವಾಗ ಕೈಗಳನ್ನು ಸ್ಯಾನಿಟೈಸರ್/ಸೋಪಿನ ನೀರಿನಿಂದ ಸ್ವಚ್ಛವಾಗಿ ಕೈಗಳನ್ನು ತೊಳೆದುಕೊಳ್ಳುವುದು. ಹಾಗೂ ಕೈಗಳಿಂದ ಆಗಿಂದಾಗ್ಗೆ ಬಾಯಿ, ಮೂಗು ಮತ್ತು ಕಣ್ಣುಗಳನ್ನು ಮುಟ್ಟಬಾರದು ಅಥವಾ ಉಜ್ಜಿಕೊಳ್ಳಬಾರದು.

9. ವಿದ್ಯಾರ್ಥಿಗಳು/ಸಿಬ್ಬಂದಿವರ್ಗ/ಉಪನ್ಯಾಸಕರು/ಪ್ರಾಂಶುಪಾಲರು,ಕಛೇರಿಯಲ್ಲಿ/ ಪರೀಕ್ಷಾ ವೇಳೆಯಲ್ಲಿ /ಪರೀಕ್ಷಾ ಕೇಂದ್ರದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವುದು.

10. ಪರೀಕ್ಷಾ ಕೇಂದ್ರಕ್ಕೆ ಬರುವ/ಕಛೇರಿಗೆ ಬರುವ ವಿದ್ಯಾರ್ಥಿಗಳು/ ಉಪನ್ಯಾಸಕರು/ ಸಿಬ್ಬಂದಿಯವರು/ ಪೋಷಕರು ಇವರುಗಳನ್ನು ಥರ್ಮಲ್ ಸ್ಕ್ರೀನಿಂಗ್‌ಗೆ ಕಡ್ಡಾಯವಾಗಿ ಒಳಪಡಿಸುವುದು.

11. ಜ್ವರ/ಶೀತ/ನೆಗಡಿ/ಕೆಮ್ಮು ಹಾಗೂ ಉಸಿರಾಟದ ತೊಂದರೆ ಮುಂತಾದ ರೋಗ ಲಕ್ಷಣಗಳುಳ್ಳ ವಿದ್ಯಾರ್ಥಿ/ಸಿಬ್ಬಂದಿಯವರ ಸೂಕ್ತ ಮಾಹಿತಿ ಪಡೆದು ಅವರಲ್ಲಿ ಅಂತ ಲಕ್ಷಣಗಳು ಕಂಡುಬಂದಲ್ಲಿ ಅಂತಹವರಿಗೂ ವೈದ್ಯಕೀಯ ಸಲಹೆ ಪಡೆಯಲು ತಿಳಿಸುವುದು.

12. ಗಾಳಿ, ಬೆಳಕು ಉತ್ತಮವಾಗಿರುವ ಕೊಠಡಿಗಳಲ್ಲಿ ಪರೀಕ್ಷೆಗಳನ್ನು ನಡೆಸುವುದು.

13. ಒಂದು ಡೆಸ್ಕ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳು ಕುಳಿತು ಪರೀಕ್ಷೆ ಬರೆಯುವಂತೆ ಹಾಗೂ ಆ ವಿದ್ಯಾರ್ಥಿಗಳ ನಡುವಿನ ಅಂತರ ಕಡಿಮೆಯಾಗದಂತೆ ನಿಗಾ ವಹಿಸುವುದು.

14. ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ತಾವು ತಂದಿರುವ ಲೇಖನ ಸಾಮಗ್ರಿಗಳನ್ನು ಮತ್ತೊಬ್ಬರಿಗೆ ನೀಡದಂತೆ ಕ್ರಮ ವಹಿಸುವುದು.

15. ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಕೈಕುಲಕಬಾರದೆಂಬ (Shaking of Hand) ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದು.

16. ಪರೀಕ್ಷಾ ಕೊಠಡಿಗಳಲ್ಲಿ ಎರಡು ಡೆಸ್ಕ್‌ಗಳ ನಡುವಿನ ಅಂತರ ಕನಿಷ್ಟ 1.5 ಮೀಟರ್ ಇರುವಂತೆ ಆಸನ ವ್ಯವಸ್ಥೆ ಮಾಡುವುದು.

17. ವಿದ್ಯಾರ್ಥಿಗಳು ಗುಂಪು ಗುಂಪಾಗಿ ಸೇರುವುದು, ಪರೀಕ್ಷಾ ಕೇಂದ್ರಕ್ಕೆ ಅತೀಬೇಗ ಆಗಮಿಸಿ ಒಟ್ಟಾಗಿ ಕುಳಿತು ಚರ್ಚಿಸುವುದು, ಪರೀಕ್ಷೆ ಮುಗಿದ ನಂತರ ಪರೀಕ್ಷಾ ಕೊಠಡಿಯಿಂದ ಹೊರಬಂದು ಪ್ರಶ್ನೆ ಪತ್ರಿಕೆ ಹಿಡಿದು ಗುಂಪಾಗಿ ತಾವು ಬರೆದ ಉತ್ತರಗಳ ಬಗ್ಗೆ ಚರ್ಚಿಸುವುದು ಮುಂತಾದುವುಗಳನ್ನು ನಿಯಂತ್ರಿಸುವುದು ಹಾಗು ಸಾಮಾಜಿಕ ಅಂತರ ಮೂಡಿಸುವುದು.

18. ವಿದ್ಯಾರ್ಥಿಗಳು ಅವರವರ ಮನೆಗಳಿಂದಲೇ Tiffin Box ಗಳಲ್ಲಿ ತಿಂಡಿ ಮತ್ತು ಊಟವನ್ನು ತೆಗೆದುಕೊಂಡು ಬಂದಲ್ಲಿ ಅವುಗಳನ್ನು ತಮ್ಮ ಮಿತ್ರರಲ್ಲಿ ಹಂಚಿ ತಿನ್ನದಂತೆ ಮುಂಜಾಗ್ರತಾ ಕ್ರಮದ ಬಗ್ಗೆ ಅರಿವು ಮೂಡಿಸುವುದು.

19. ಪರೀಕ್ಷಾ ಸಂದರ್ಭದಲ್ಲಿ/ಪರೀಕ್ಷಾ ಕೊಠಡಿಗಳಲ್ಲಿ/ಕಛೇರಿಯಲ್ಲಿ ಆಗಿಂದಾಗ್ಗೆ ಕಾಫಿ/ಟೀ ಸೇವನೆಯನ್ನು ನಿಯಂತ್ರಿಸುವುದು.

20. ಶಾಲಾ/ಕಾಲೇಜುಗಳಲ್ಲಿ ಕರೋನಾ ವೈರಸ್ ನಿಯಂತ್ರಣದ ಬಗ್ಗೆ WHO ನೀಡಿರುವ ಮಾರ್ಗಸೂಚಿಗಳ ಬಗ್ಗೆ ಸಂಸ್ಥೆಯಲ್ಲಿ/ಸಿಬ್ಬಂದಿವರ್ಗದವರಲ್ಲಿ/ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು.

21. ವಿದ್ಯಾರ್ಥಿಗಳು / ಸಿಬ್ಬಂದಿಯವರು / ಉಪನ್ಯಾಸಕರು / ಪ್ರಾಂಶುಪಾಲರು ಈ ಸಂದರ್ಭದಲ್ಲಿ ಪರಸ್ಪರ ಸಮನ್ವಯದೊಂದಿಗೆ ಆತ್ಮಸ್ಥೈರ್ಯದೊಂದಿಗೆ ತಮ್ಮ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಪರೀಕ್ಷಾ ನಿಯಮಗಳು ಉಲ್ಲಂಘನೆಯಾಗದಂತೆ ಪರೀಕ್ಷಾ ಕಾರ್ಯವನ್ನು ನಿರ್ವಹಿಸುವುದು.

ಮೇಲ್ಕಾಣಿಸಿದ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಪ್ರತಿಯೊಂದು ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಕೇಂದ್ರಕ್ಕೆ ಬರುವಂತಹ ಎಲ್ಲರೂ ಎಚ್ಚರವಹಿಸಿ ಪಾಲಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ

ಪ್ರತಿಗಳು : 1. ಇ-ಆಡಳಿತ ವಿಭಾಗಕ್ಕೆ – ಪ್ರಕಟಿಸುವ ಸಲುವಾಗಿ
2. ಇ.ಸಿ.ಎಸ್ ವಿಭಾಗಕ್ಕೆ